ಮೇಯುತ್ತಿದ್ದ ಕರುವಿನ ಕಣ್ಣಿನಲ್ಲಿ ಸಂಜೆಯ ಮುದಿ ಸೂರ್ಯನ ಬೆಳಕು ತುಳುಕುತ್ತಿದೆ. ಈ ಕರು ತಿನ್ನಬೇಕಾದ ಹುಲ್ಲನ್ನೊಮ್ಮೆ ಮನೆಯೆಡೆಗೆ ಸಾಗುವ ರಸ್ತೆಯ ಅಂಚಿನಲ್ಲಿದ್ದ ತನ್ನ ಅಮ್ಮನನ್ನೊಮ್ಮೆ ನೋಡುತ್ತಿದೆ. ರಸ್ತೆ ಅಂಚಿನ ಹಸು 'ಅಂಬಾ' ಎಂದು ಕರೆದು ಸುಮ್ಮನಾಯಿತು. ಅದು ಮುಳುಗುವ ಸೂರ್ಯನನ್ನು ಮಾತಾಡಿಸಿತೊ, ತನ್ನ ಕರುವನ್ನು ಕರೆಯಿತೊ... ಸಂಜೆಯ ಬೆಳಕಿನಲ್ಲಿ ಆವರೆಡೂ ಬಂಗಾರದ ಪುತ್ಥಳಿಯಂತೆ ಹೊಳೆಯುತ್ತಿದ್ದವು.

ಸೂರ್ಯ ಮುಳುಗುವ ಹೊತ್ತಿಗೆ ನಮ್ಮ ಹೊಟ್ಟೆ ತುಂಬುತ್ತದೊ, ನಮಗೆ ಹೊಟ್ಟೆ ತುಂಬುವ ಹೊತ್ತಿಗೆ ಸೂರ್ಯ ಮುಳುಗುತ್ತಾನೊ... ಹೀಗೊಂದು ಪ್ರಶ್ನೆಯನ್ನು ತನ್ನ ಅಮ್ಮನಿಗೆ ಕೇಳಬೇಕೆಂದು ಆ ಕರು ಯೋಚಿಸುತ್ತಿತ್ತು.

ಲೋಕ ಸಂಜೆಗೆ ಅಣಿಯಾಗತೊಡಗಿದೆ. ಬೆಳಗ್ಗೆ ಹೋದ ಹಾದಿಯಲ್ಲೇ ಬೆಳ್ಳಕ್ಕಿಗಳು ವಾಪಸ್ಸು ಹೊರಟಿವೆ. ಮತ್ತೊಂದು ಕುಟುಕು. ಮತ್ತೊಂದು ಕನಸು. ಗೂಡಿನಲ್ಲಿ ಕಾದು ಕೂತ ಮರಿಗಳ ಕಣ್ಣಲ್ಲಿ ಇಡೀ ಹಗಲಿನ ವರದಿ ಓದಿಕೊಳ್ಳುವ ಹಂಬಲ ಅವು ಬಡಿಯುತ್ತಿರುವ ರೆಕ್ಕೆಗಳಲ್ಲಿ ಕಾಣಿಸುತ್ತಿದೆ. ಈ ಬೆಳಗು ಸಂಜೆಗಳು ಹಕ್ಕಿಗಳ ಮನೆಯ ದಾರಿಯನ್ನು ನೆನಪಿಟ್ಟುಕೊಂಡು ಜತನ ಮಾಡುತ್ತವೆ.

ಬೆಳಕು ಸೋತು ಹಣ್ಣಾಗಿದೆ. ನಮ್ಮ ನಿಮ್ಮ ನೆರಳುಗಳನ್ನು ಕಸಿದುಕೊಂಡು ಹೊರಟು ನಿಂತಿದ್ದಾನೆ ಸೂರ್ಯ. ಗಿಡದಲ್ಲಿ ಎಷ್ಟೊಂದು ಹೂವುಗಳು ಉದುರಲು ಅಣಿಯಾಗಿವೆ. ಸೂರ್ಯನೂ ಈಗ ಬಾಡಿ ಹೋದ ಒಂದು ಹೂವು. ಸಂಜೆಗೆ ಹೂವುಗಳಷ್ಟೇ ಉದುರುವುದಿಲ್ಲ. ಅವುಗಳ ಜೊತೆ ಹಣ್ಣಾದ ಸೂರ್ಯನೂ ಉದುರುತ್ತಾನೆ.



ಬೆಳಕಿನ ದಸ್ತಗಿರಿಯಾಗಿದೆ. ಆರೋಪಿ ಬೆಳಕನ್ನು ವಿಚಾರಣೆಗೆಂದು ಕಟಕಟೆಯ ಮುಂದೆ ನಿಲ್ಲಿಸಲಾಗಿದೆ. ಕತ್ತಲೆಯೂ ಕೂಡ ಆರೋಪಿಯೇ. ಹಗಲು ಬೆಳಕಿನ ವಿಚಾರಣೆಯೇ ಸಂಜೆ ಎನ್ನಬಹುದೇ? ಬೆಳಕು ಕೆಲವಕ್ಕೆ ಉತ್ತರ ನೀಡಬೇಕಿದೆ. ಕತ್ತಲೂ ಸಮಜಾಯಿಷಿ ನೀಡಬೇಕಿದೆ. ಯಾರದು ಹೆಚ್ಚು, ಯಾರದು ಕಡಿಮೆ... ಇದು ರಾತ್ರಿಯೂ ಅಲ್ಲ, ಹಗಲೂ ಅಲ್ಲ... ಮತ್ತೇನಿದು?

ಅರ್ಧ ಚಮಚ ಹಗಲನ್ನು, ಅರ್ಧ ಚಮಚ ಇರುಳನ್ನು ದಣಿದ ತಣ್ಣನೆಯ ಗಾಳಿಯೊಳಗೆ ಸುರಿದು ಅಲುಗಾಡಿಸಿದರೆ ಏನು ದೊರೆಯುತ್ತದೆ... !? ಹಸುಗಳು ಮನೆ ಹಾದಿ ಹಿಡಿದಿವೆ. ಎಲ್ಲಾ ಹಸುಗಳ ಹಿಂದೆ ಅವನೊಬ್ಬ ಹೆಜ್ಜೆ ಹಾಕುತ್ತಿದ್ದಾನೆ. ಅವನು ಥೇಟ್ ಸಂಜೆಯಂತೆ ಕಾಣುತ್ತಿದ್ದಾನೆ. ಬೆನ್ನು ತುಸು ಬಾಗಿದೆ. ಚರ್ಮ ಸುಕ್ಕು. ಅವನೂ ಉದುರಿ ಬೀಳುವ ಒಂದು ಹೂವು, ಆ ಸೂರ್ಯನಂತೆ. ಅವನು ಹಸು ಕಾದನೊ, ಹಸುಗಳೇ ಅವನನ್ನು ಕಾದವೊ.. ಇಬ್ಬರಿಗೂ ಗುಮಾನಿ. ಇಡೀ ದೇಹವನ್ನು ತನ್ನ ದಣಿದ ಕಾಲುಗಳ ಮೇಲೆ ಹೊರಿಸಿ ಹೆಜ್ಜೆ ಹಾಕುತ್ತಿದ್ದಾನೆ. ಸುಮ್ಮನೆ ಅಲ್ಲಲ್ಲಿ ಮಲಗಿ ಎದ್ದು ಅವನು ಹಗಲನ್ನು ಕಳೆದನೊ... ಹಗಲೇ ಇವನನ್ನು ಕಳೆದು ಮುಂದೆ ಹೊಯಿತೊ... ಇಬ್ಬರಿಗೂ ಗೊತ್ತಿಲ್ಲ.

ದೂಳು, ನಡೆದು ಬರುತ್ತಿರುವ ಗೋವಿನ ಪಾದಗಳಿಂದ ಏಳುತ್ತಿರುವ ದೂಳು. ಗೋಧೂಳಿ. ಮಣ್ಣಿನ ಕಣಕಣವು ಬಂಗಾರವೇ ಆಗಿ ಬಿಡುವ ಪರಿ ಇದು.

ಊರಿನ ಮೇಲೆ ಸದ್ದಿಲ್ಲದೆ ಹಣ್ಣಾದ ಬೆಳಕು ಸುರಿಯುತ್ತಿದೆ. ಸಂಜೆ ಎಲ್ಲವನ್ನೂ ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಅದಕ್ಕೆ ಕಲ್ಲೂ ಒಂದೇ, ಕರುವೂ ಒಂದೇ.

ಇಲ್ಲೊಂದು ಮಗು.. ಕೂಲಿಗೆ ಹೋದ